ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/16/2016-17. ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಹಳ್ಳಿ ದೊಡ್ಡಗುಡದಪ್ಪ<br>2)ಗೋಣಿಬಸಪ್ಪ ತಂದೆ ಲೇಟ್ ಹಳ್ಳಿ ಕರಿಯಪ್ಪ<br>3)ಪರುಸಪ್ಪ ತಂದೆ ಲೇಟ್ ಹಳ್ಳಿ ಕರಿಯಪ್ಪ<br>4)ರೇವಪ್ಪ ತಂದೆ ಲೇಟ್ ಹಳ್ಳಿ ಕರಿಯಪ್ಪ<br>5)ಕೊಟ್ರಮ್ಮ ಗಂಡ ಲೇಟ್ ಅಂಜೀನಪ್ಪ<br>6)ಕೊಟ್ರೇಶ ತಂದೆ ಲೇಟ್ ಹಳ್ಳಿ ಕರಿಯಪ್ಪ<br>ರಾಮನಾಯ್ಕನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |
| ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 588ಬಿ. . ವಿಸ್ತೀರ್ಣ 6-32.. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 588ಬಿ. ವಿಸ್ತೀರ್ಣ 6-32.. ಎಕ್ರೆ ಜಮೀನನ್ನು ಸದರಿ ತಾಲೂಕು ರಾಮನಾಯ್ಕನಹಳ್ಳಿ ಗ್ರಾಮದ ಗೋಣಿಬಸಪ್ಪ ತಂದೆ ಲೇಟ್ ಹಳ್ಳಿ ಕರಿಯಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೆ.ಅಯ್ಯನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 20-02-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ವಂಶವೃಕ್ಷಕ್ಕೂ ಹಾಗೂ ನಮೂನೆ-21 ರ ನೋಟಿಸಕ್ಕೂ ತಾಳೆ ಇಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 68/2015-16. ದಿನಾಂಕ 21-03-2016 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 31-05-2016 ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 588ಬಿ. ವಿಸ್ತೀರ್ಣ 6-32.. ಎಕ್ರೆ ಜಮೀನು ನಮ್ಮ ತಂದೆಯವರಾದ ಕರಿಯಪ್ಪ ತಂದೆ ಲಿಂಗಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ24-06-1998 ರಂದು ಹಾಗೂ ನನ್ನ ತಾಯಿಯವರಾದ ದುರುಗಮ್ಮ ಗಂಡ ಕರಿಯಪ್ಪ ಇವರು ದಿನಾಂಕ 14-09-2014 ರಂದು ಹಾಗೂ ನನ್ನ ತಮ್ಮನಾದ ಅಂಜೀನಪ್ಪ ತಂದೆ ಕರಿಯಪ್ಪ ಇವರು ದಿನಾಂಕ 16-09-2014 ರಂದು ನಿಧನ ಹೊಂದಿರುತ್ತಾರೆ. ಕಾರಣ ಸದರಿ ಕರಿಯಪ್ಪ ತಂದೆ ಲಿಂಗಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರುಗಳನ್ನು ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಬಗ್ಗೆ ಗ್ರಾಮಲೆಕ್ಕಿಗರು ಗ್ರಾಮದಲ್ಲಿ ಮರು ವಿಚಾರಣೆ ಮಾಡಲಾಗಿ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಯಾವ ಆಕ್ಷೇಪಣೆಗಳು ಇಲ್ಲವೆಂದು ಮಹಜರುಗಳೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 588ಬಿ. ವಿಸ್ತೀರ್ಣ 6–32. ಎಕ್ರೆ ಜಮೀನನ್ನು ಪೋತಿವಾರಸು ಹಕ್ಕಿನ ಪ್ರಕಾರ ಕರಿಯಪ್ಪ ತಂದೆ ಲಿಂಗಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಅರ್ಜಿದಾರರಾದ ಗೋಣಿಬಸಪ್ಪ ತಂದೆ ಲೇಟ್ ಹಳ್ಳಿ ಕರಿಯಪ್ಪ. ಪರುಸಪ್ಪ ತಂದೆ ಲೇಟ್ ಹಳ್ಳಿ ಕರಿಯಪ್ಪ. ರೇವಪ್ಪ ತಂದೆ ಲೇಟ್ ಹಳ್ಳಿ ಕರಿಯಪ್ಪ. ಕೊಟ್ರಮ್ಮ ಗಂಡ ಲೇಟ್ ಅಂಜಿನಪ್ಪ. ಕೊಟ್ರೇಶ ತಂದೆ ಲೇಟ್ ಹಳ್ಳಿ ಕರಿಯಪ್ಪ. ರಾಮನಾಯ್ಕನಹಳ್ಳಿ ಗ್ರಾಮ ಇವರುಗಳ ಹೆಸರುಗಳನ್ನು ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡಕಛೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಗೋಣಿಬಸಪ್ಪ ತಂದೆ ಲೇಟ್ ಹಳ್ಳಿ ಕರಿಯಪ್ಪ ಹಾಗೂ ಇತರರು ರಾಮನಾಯ್ಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.